CLAUSE 1 Etc.

MADAM SPEAKER.— I will now put Clause 1, to the vote of the House- The question is.

"That Clause I, the long Title, The Preamble and the Enacting Formula do stand part of the Bill"

The motion was adopted.

Clause 1. tFe long Title, The Preamble and tde Enacting Formula were added to the Bill.

MOTION TO PASS

SRI B: BASAVALINGAPPA,—(Minister for Municipal Administration) I beg to move that the Mysore Prevention of Cow Slaughter and Cattle Preservation (Amendment) Bil. 1973 be passed.

MADAM SPEAKER.— I will now put the Bill to vote. The question is,

"That the Mysore Prevention of Cow Slaughter and Cattle Preservation (Amendment) Bill, 1972, be passed."

The motion was adopted and the Bill was passed.

MYSORE LIFTS BILL 1973. MOTION TO CONSIDER. MOTION TO CONSIDER

SRI H. M. CHANNABASAPPA — Madam Speaker, I beg to move that the Mysore Lifts Bill, 1973 be taken into consideration.

MADAM SPEAKER.— Motion moved.

"That the Mysore Lifts Bill, 1973 be taken into consideration"

SRI H. M. CHANNABASAPPA — Madam Speaker, with the construction of multy-storeyed buildings and big buildings in Cities like Bangalore and Mysore, the need for putting up lifts and working them well in a satisfactory manner has increased. At present there is a Lifts Bill which applies to Bombay Karnataka area. With a view to have a law applicable to the entire Mysore State we have brought this Bill. The lifts are very necessary now-a-days and they are on the increase. Safety measures have to be devised and the working of the Lifts will have to be controlled and regulated and also

(SRI H. M. CHANNABASAPPA)

precautionery measures have to be taken in operating the lifts. Unless we have a law to enforce some of the provision and regulatory provisions it would be difficult to manage. So the purpose of this Bill is very simple The Bombay Lifts Act 1939, as I said, was in force in Bombay area and it is not applicable to other areas of the State. The Hon. Members will please agree that a Bill on the lines of the Bombay Act should be introduced, so that we may have a uniform Act all over the State to facilitate controlling, management regulation of the working of the lifts and for taking safety devices for operating the lifts. The Bill I have introduced is a very simple one It provides for several provisions one of which is that a person who wants to construct a lift must obtain permission and when once the permission is granted he should pay a fee of Rs. 100/- and abtain a licence for he should allow the machinery to be inspected at appropriate times to be fixed by the concerned authorities. The fee of Rs. 100 to be paid by him can be collected as land revenue. If any additions and alterations are to be made, the owner will have to take permission of the appropriate authority and whenever the Inspector of Lifts wants to inspect it periodically, he should make arrangements for inspection at all reasonable hours and the inspectorate must be authorised to get into premises whenever they want to inspect the working of the lifts Whenever any alterations are found necessary by the owner he must obtain the permission of the authorities to get it done. Whenever accidents happen, those accidents will have to be reported. Whenever there is any violation of rules or provisions of the Act, the owner is liable for punishment. If any owner contravenes any of the provisions, he is liable for punishment, and the authorities are empowered to impose penalty for continuing contravention of any provisions of the Act The enforcement of this law will not entail any additional expenditure because the Government is intending appointing the Government Electrical Inspectorate as an Inspector of the Lifts. These are the important provisions this Bill is having and it is before you for consideration and passing and I hope that this Bill will be passed without any comment because it is a simple measure required for the working of of the lifts throughout the State. But if there are any comments and constructive suggestions, I shall be very happy to consider them.

† ಟಿ ಆರ್. ಶಾಮಣ್ಣ —ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚೆನ್ನಬಸಪ್ಪನವರು ತಂದಿರತಕ್ಕಂಥ ಮೈಸೂರು ಲಿಫ್ಟ್ ಬಿಲ್ ಎನ್ನುವುದು ಲಿಫ್ಟ್‌ಗಳಿಗೆ ಸಂಬಂಧಪಟ್ಟದ್ದಾಗಿದೆ. ಸಾಧಾರಣವಾಗಿ ಈ ಲಿಫ್ಟ್‌ಗಳು ಸರ್ಕಾರದ ಅನೇಕ ಕಚೇರಿಗಳಿಗೂ ಬಿಲ್ಡಿಂಗ್‌ಗಳಲ್ಲಿ ಇರುತ್ತವೆ. ಇದು ಸಾವುಕಾರರಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಹೆಚ್ಚಿನ ಆಕ್ಷೇಪಣೆ ಇಲ್ಲ ಎಂದೂ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದರೆ ಒಂದು ಏನು ಎಂದರೆ ನನಗೆ ಇದರ ಬಗ್ಗೆ ಒಂದು ತಿದ್ದುಪಡಿ ತರುವುದಕ್ಕೆ ಅವಕಾಶ ಕೊಡಲಿಲ್ಲ ಎನ್ನುವುದೇ ಹೊರತು ಬೇರೆ ಏನೂ ಇಲ್ಲ. ಈಗ ಸಾಧಾರಣವಾಗಿ ಲಿಫ್ಟ್ ಇರತಕ್ಕಂಥಾದ್ದು ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಅದರಲ್ಲೂ ಹೆಚ್ಚಿಗೆ ಸರ್ಕಾರಿ ಕಟ್ಟಡಗಳಲ್ಲಿ ಇರುತ್ತವೆ, ಅಲ್ಲದೆ

ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ಗಳು ಇರುವ ಕಡೆ ಮಾತ್ರ ಇದು ಇರುತ್ತೆ ಆದ್ದರಿಂದ ಮಾನ್ಯ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳು ಈ ಬಿಲ್ಲನ್ನು ಮೂವ್ ಮಾಡಿರುವುದರಿಂದ ನಾನು ಮೊದಲನೆಯದಾಗಿ ಅವರನ್ನು ಕೇಳಿಕೊಳ್ಳುವುದೇನೆಂದರೆ ಈ ಲಿಫ್ಟ್‌ಗಳು ಸರಿಯಾದ ರೀತಿಯಲ್ಲಿ ವರ್ಕ್ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇದು ಏತಕ್ಕೆ ಹೇಳುತ್ತೇನೆಂದರೆ ಬೆಂಗಳೂರಿನಲ್ಲಿ ಎಷ್ಟೋ ಸಾರಿ ಎಲೆಕ್ಟ್ರಿಸಿಟಿ ಫೆಯಲ್ಯೂರ್ ಆಗಿಗುವುದು ತವಗೆ ಗೊತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುವುದು ಇಷ್ಟೆ. ಆ ಲಿಫ್ಟ್‌ಗಳನ್ನು ಸರಿಯಾಗಿ ಉಪಯೋಗಿಸುವುದಕ್ಕೆ ಸರಿಯಾದ ಏರ್ಪಾಡನ್ನು ಮಾಡಬೇಕು. ಕೆಲವು ಸಾರಿ ಮದುವೆ ಮುಂಜಿಗಳಲ್ಲಿ ಮತ್ತು ವಿದ್ಯಾರ್ಥಿಗಳು ಪರೀಕ್ಷೆ ಕಾಲದಲ್ಲಿ ಓದುವ ಸಂದರ್ಭದಲ್ಲಿ ಎಲೆಕ್ಟ್ರಿಸಿಟಿ ಷಡ್ ಡೌನ್ ಆಗುವುದನ್ನು ನಾವು ಎಷ್ಟೋಸಾರಿ ಅನುಭವಿಸಿದ್ದೇವೆ. ಆದ್ದರಿಂದ ಆ ರೀತಿ ಎಲೆಕ್ಟ್ರಿಸಿಟಿ ಷಟ್ ಡೌನ್ ಆಗುವುದಕ್ಕೆ ಅವಕಾಶ ಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಮೊದಲನೆಯದಾಗಿ ಇಂಥ ಬಿಲ್ಲನ್ನು ತರುವ ಅವಶ್ಯಕತೆ ಮೊಹಲು ಇರಲಿಲ್ಲ ಆಗ ಬೆಂಗಳೂರಿನಲ್ಲೇ ಆಗಲಿ ಅಥವಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ರೀತಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳು ಇರಲಿಲ್ಲ. ಇತ್ತೀಚೆಗೆ ಮಲ್ಟಿಸ್ಟೋರೀಡ್ ಬಿಲ್ಡಿಂಗಳು ಬರುತ್ತಾ ಇವೆ. ಆದ್ದರಿಂದ ಲಿಫ್ಟ್‌ಗಳನ್ನು ಏರ್ಪಾಡು ಮಾಡಿಕೊಳ್ಳಬೇಕಾಗಿದ್ದಾರೆ. ಈ ಲಿಫ್ಟ್‌ನ್ನು ಉಪಯೋಗಿಸುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕು. ಅದಕ್ಕೆ ಒಂದುನೂರು ರೂಪಾಯಿ ಫೀಸ್ ಹಾಕಿದ್ದಾರೆ. ಆದರೆ ಆ ಫೀಸನ್ನು ವರ್ಷವರ್ಷವೂ ಕೊಡಬೇಕೇ ಅಥವಾ ಮೊದಲನೆ ಸಾರಿ ಕೊಟ್ಟರೆ ಸಾಕೇ ಎಂದು ಅದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ. ಮತ್ತು ಲಿಫ್ಟ್ ಆಪರೇಟ್ ಮಾಡಬೇಕಾದರೆ ಲೈಸೆನ್ಸ್ ಇರಬೇಕೆಂದು ಹೇಳುತ್ತಾರೆ. ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಅದಕ್ಕೆ ಸರಿಯಾದ ಶಿಕ್ಷಣ ಬೇಕಾಗುತ್ತದೆ. ಲೈಸೆನ್ಸ್ ಪಡೆಯಬೇಕಾದರೆ ಅರ್ಹತೆ ಬೇಕು, ಆ ಅರ್ಹತೆಯನ್ನು ಪಡೆಯಬೇಕಾದರೆ ಅದಕ್ಕೆ ಬೇಕಾದ ಶಿಕ್ಷಣದ ತರಬೇತಿ ಕೊಡಬೇಕು. ಆದ್ದರಿಂದ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್‌ಟ್ಯೂಟ್‌ನಲ್ಲಿ ತರಬೇತಿಯನ್ನು ಕೊಟ್ಟು ಅದಕ್ಕೆ ಸಂಬಂಧ ಪಟ್ಟ ಸಣ್ಣಪುಟ್ಟ ರಿಪೇರಿಗಳನ್ನು ಮಾಡಿಕೊಳ್ಳುವುದಕ್ಕೆ ಚಾಲಕನಿಗೆ ಬೇಕಾದಂಥ ಒಂದು ಅರ್ಹತೆ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂಹು ಕೇಳಿಕೊಳ್ಳುತ್ತೇನೆ. ಸಾಮಾನ್ಯವಾಗಿ ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಅರ್ಹತೆ ಬೇಕಾಗುತ್ತದೆ.

6-00 P.M.

ತಮ್ಮ ಬಿಲ್ಲಿನಲ್ಲಿ ಸುಮಾರು ೫೦೦ ಲಿಫ್ಟ್‌ಗಳು ರಾಜ್ಯದಲ್ಲಿ ಇವೆಯೆಂದು ಹೇಳುತ್ತೀರಿ ಇದರಲ್ಲಿ ಜಾಸ್ತಿ ಲಿಫ್ಟ್‌ಗಳು ಸರ್ಕಾರಕ್ಕೆ ಸೇರಿದುವು ಖಾಸಗಿ ಲಿಫ್ಟ್‌ಗಳು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಇವುಗಳ ರಿಪೇರಿ ಮತ್ತು ಇನ್ಸ್‌ಪೆಕ್ಷನ್ ಚಾರ್ಜಸ್‌ಗಾಗಿ ಒಟ್ಟು ೧೫,೦೦೦ ರೂಪಾಯಿಗಳನ್ನು ಒದಗಿಸಿದ್ದೀರಿ ಇಡೀ ರಾಜ್ಯಕ್ಕೆ ಒಬ್ಬಿಬ್ಬರನ್ನು ಇನ್ಸ್‌ಪೆಕ್ಟರ್ ಅನ್ನು ನೇಮಕ ಮಾಡಿದರೆ ಸಾಲದು ಅಲ್ಲದೆ ತಾವು ಒದಗಿಸಿರುವ ೧೫ ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ. ಇನ್ನು ಹೆಚ್ಚು ಖರ್ಚಾಗುತ್ತದೆಂದು ನನ್ನ ಲೆಕ್ಕಾಚಾರ ಇದೆ. ಈ ಲಿಫ್ಟ್‌ಗಳು ಅನೇಕ ಸಾರಿ ಕೆಟ್ಟು ಹೋಗುತ್ತವೆ. ಇವುಗಳನ್ನು ಸರಿಪಡಿಸುವುದಕ್ಕೆ ಸರಿಯಾದಂಥ ತರಬೇತಿಯಾದಂಥ ಜನ ಬೆಂಗಳೂರಿನಲ್ಲಿ ಬಹಳ ಕಡಿಮೆ. ಬೆಂಗಳೂರು ನಗರ ಪರ್ಫೆಕಲ್ ಆಗಿ ಬೆಳೆಯುತ್ತಾ ಇಲ್ಲ, ಹಾರಿಜಾಂಟಲ್ ಆಗಿ ಬೆಳೆಯುತ್ತಿದೆ. ಅನೇಕ ಸಾರಿ ನಾವು ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಬೇಕು ಎಂದು ಹೇಳುತ್ತಿರುತ್ತೇವೆ ಲಿಫ್ಟ್‌ಗಳ ರಿಪೇರಿ ಮಾಡುವಷ್ಟಕ್ಕಾದರೂ ತರಬೇತಿ ಶಿಕ್ಷಣ ಕೊಡುವುದಕ್ಕೆ ಏನಾದರೂ ಒಂದು ಏರ್ಪಾಡು ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ೯ನೇ ಪ್ಯಾರಾದಲ್ಲಿ 'Owner to give facilities for inspection.—The owner of a building in which a lift is installed or his agent appointed under sub-section (2) of section 10 shall afford all reasonable facilities to the officer for inspecting the lift....." ಎಂದು ಇದೆ. ಇದರ ಬಗ್ಗೆ ನಾವು ಹೆಚ್ಚು ಟೀಕೆ ಮಾಡಬೇಕಾಗಿಲ್ಲ. ರಿಪೋರ್ಟ್ ಆಫ್ ಆಕ್ಸಿಡೆಂಟ್ಸ್ ಬಗ್ಗೆ ಹೇಳುವುದಾದರೆ ನಮ್ಮ ವಿಧಾನ ಸೌಧದ ಲಿಫ್ಟ್‌ನಲ್ಲಿ ಅನೇಕ ಸಾರಿ ಕೆಲವರು ಸಿಕ್ಕಿಹಾಕಿಕೊಂಡು ಅವರಿಗೆ ಏನಾಪ್ಸ್ ಇಂಜ್ಯುರಿ ಆಗಿದೆ ಆದ್ದರಿಂದ ಇದರಲ್ಲಿ ಉಂಟಾಗುವ ಆಕ್ಸಿಡೆಂಟ್ಸ್ ಬಗ್ಗೆ ಬರೀ ರಿಪೋರ್ಟ್ ಅನ್ನು ತರಿಸಿಕೆ ಇಂದರೆ ಆಗುವುದಿಲ್ಲ, ಆಕ್ಸಿಡೆಂಟ್ಸ್ ಆಗದಹಾಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು.

ಇನ್ನು ರಿಕವರಿ ಆಫ್ ಫೀಸ್ ಬಗ್ಗೆ, ಇದಕ್ಕೆ ಬಗ್ಗೆ ರೂಲ್ಸ್ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಇದರಿಂದ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ, ಹೆಚ್ಚು ಯೋಚನೆ ಮಾಡಿ, ಇದಕ್ಕೆ ಸೂಕ್ತ ವಾದಂಥ ನಿಯಮಾವಳಿಗಳನ್ನು ಹಾಕಿ ಇದನ್ನು ಜಾರಿಗೆ ತರಬೇಕು ಎಂದು ನಾನು ಸಲಹೆ ಕೊಡುತ್ತೇನೆ. ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಮತ್ತೆ ಧನ್ಯವಾದಗಳನ್ನು ಅರ್ಪಿಸುತ್ತೇನೆ

† ಶ್ರೀ ಎಂ.ಎಸ್. ಕೃಷ್ಣನ್.—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಲಿಫ್ಟ್ ಬಿಲ್ ಬಗ್ಗೆ ನನ್ನ ಸ್ನೇಹಿತರು ಹೇಳಿದ ಹಾಗೆ ಇದು ಹೆಚ್ಚು ವಿವಾದಾಸ್ಪದವಾದ ವಿಷಯವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾದ ಬೆಂಗಳೂರು ನಗರದಲ್ಲಿ ಬರುವ ಪ್ರಶ್ನೆ ಏನೆಂದರೆ ಇದು ಬಹುದಾಕಾರವಾಗಿ ಬೆಳೆಯುತ್ತಾ ಇದೆ. ಬೆಂಗಳೂರು ಮೇಲಿಂದ ಮೇಲಕ್ಕೆ ಬೆಳೆದರೆ ಈ ಲಿಫ್ಟ್‌ಗಳ ಅವಶ್ಯಕತೆ ಹೆಚ್ಚು ಇರುತ್ತದೆ. ಇದರಲ್ಲಿ ಎರಡು ಮುಖ್ಯವಾದ ಅಂಶಗಳು ಇವೆ. ಮೊದಲನೆಯದು, ಲಿಫ್ಟ್‌ಗಳನ್ನು ಹಾಕಿಸುವಂಥ ಜನ, ತಮಗೆ ಗೊತ್ತಿರುವ ಹಾಗೆ ಶ್ರೀಮಂತರು. ಬೇರೆ ಯಾರಿಂದಲೂ ಸಾಧ್ಯವಿಲ್ಲ. ಹೀಗೆ ಇರುವುದರಿಂದ ಸರ್ಕಾರ ಇದರಿಂದ ಹಣ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಲಿಫ್ಟ್ ಹಾಕಿಸುವುದಕ್ಕೆ, ೧೦೦ ರೂಪಾಯಿ ಅಪ್ಲಿಕೇಷನ್ ಫೀಸ್ ಏನು ಇಟ್ಟಿದ್ದೀರಿ, ಮತ್ತು ಮ್ಯಾನುಯಲ್ ಫೀಸ್ ೫೦ ರೂಪಾಯಿ ಏನು ಇದೆ ಅದು ಸಾಲದು ಇನ್ನೂ ಹೆಚ್ಚು ಮಾಡಬಹುದು. ತಮ್ಮ ಬಿಲ್ಲಿನ ಪೇಜ್ ೭ರಲ್ಲಿ Clause 12, 'An annual fee of rupees fifty shall be charged for such inspection and such fee shall include the charges for the inspection of the Moter'. ಎಂದು ಇದೆ. ನನ್ನ ಅಭಿಪ್ರಾಯದಲ್ಲಿ ಇದನ್ನು ಜಾಸ್ತಿ ಮಾಡುವುದಕ್ಕೆ ಅವಕಾಶ ಇದೆ. ಇದನ್ನು ಮಾಡ ಬೇಕು ಎಂದು ನಾನು ಹೇಳುತ್ತೇನೆ. ಅಪ್ಲಿಕೇಷನ್ ಫೀಸ್ ಇನ್ನೇ ೨೦೦ ರೂಪಾಯಿ ಮಾಡಬಹುದು. ಮತ್ತೆ ನೀವು ಹೇಳುವ ರೀತಿಯಲ್ಲಿ ಲಿಫ್ಟ್‌ಗಳ ರಿಪೇರಿಗಾಗಿ ಇಡೀ ರಾಜ್ಯಕ್ಕೆ ಸುಮಾರು ೧೫ ಸಾವಿರ ರೂಪಾಯೀಗಳನ್ನು ಇಟ್ಟಿರುವುದು ಸಾಕಾಗುವುದಿಲ್ಲ. ಇದರೊಂದಿಗೆ, ಲಿಫ್ಟ್‌ಗಳನ್ನು ಇನ್ಸ್‌ಪೆಕ್ಟ್ ಮಾಡುವುದಕ್ಕೆ ಒಬ್ಬ ಇನ್ಸ್‌ಪೆಕ್ಟರನ್ನು ಅಪಾಯಿಂಟ್ ಮಾಡಿದರೆ ಸಾಲದು, ಹೆಚ್ಚು ಜನರನ್ನು ಅಪಾಯಿಂಟ್ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಅಪ್ಲಿಕೇಷನ್ ಫೀ ೧೦೦ ರೂಪಾಯಿ ಇರುವುದನ್ನು ೨೦೦ ರೂಪಾಯಿ ಮಾಡಿ ೫೦ ರೂಪಾಯಿ ಇನ್ಸ್‌ಪೆಕ್ಷನ್ ಚಾರ್ಜಸ್ ಇರುವುದನ್ನು ಬಾಂಬೆ ಮತ್ತು ಕಲ್ಕತ್ತಾಗಳಲ್ಲಿರುವಂತೆ, ಗ್ರೇಡೆಡ್ ಮಾಡಿದರೆ ಒಳ್ಳೆಯದು.

ಶ್ರೀ ಟಿ. ಆರ್. ಶಾಮಣ್ಣ.—ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಇಟ್ಟಿರುವವರು ಶ್ರೀಮಂತರು, ಈ ರೀತಿ ಲಿಫ್ಟ್‌ಗಳ ರಿಪೇರಿ ಜಾಸ್ತಿ ಫೀಸ್ ಮಾಡುವುದರಿಂದ ಇವರು ಸಾಧಾರಣವಾಗಿ ಬಾಡಿಗೆಯನ್ನು ಹೆಚ್ಚು ಮಾಡುತ್ತಾರೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಈಗಿನ ಕಾಲದೊಳಗೆ ಲಿಫ್ಟ್ ಇಲ್ಲದೆ ಬಾಡಿಗೆಯನ್ನೇ ಜಾಸ್ತಿ ಕೇಳುವಾಗ, ಈ ಪ್ರಶ್ನೆ ಏನೂ ಬರಲಾರದು. ಆದ್ದರಿಂದ ತಾವು ಇದನ್ನು ಪರ್ಯಾಲೋಚನೆ ಮಾಡುತ್ತೀರಿ ಎಂದು ನನ್ನ ಅಭಿಪ್ರಾಯ.

ಎರಡನೆಯದಾಗಿ, ಆಕ್ಸಿಡೆಂಟ್ಸ್ ಬಗ್ಗೆ ತಾವು ತಮ್ಮ ಬಿಲ್ಲಿನಲ್ಲಿ ಹೇಳಿದ್ದೀರಿ. ಆಕ್ಸಿಡೆಂಟ್ಸ್ ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಆಕ್ಸಿಡೆಂಟ್ಸ್ ಆದವರಿಗೆ ಕಾಂಪೆನ್ಸೇಷನ್ ಕೊಡುವುದಕ್ಕೆ ತಮ್ಮ ಕಾನೂನಿನಲ್ಲಿ ಅವಕಾಶವಿದೆಯೇ? ಯಾವ ಪ್ರಕಾರ ಇವರಿಗೆ ಕಾಂಪೆನ್ಸೇಷನ್ ಕೊಡುತ್ತೀರಿ ಎನ್ನುವುದನ್ನು ತಾವು ಹೇಳಿಲ್ಲ. ತಮಗೆ ಗೊತ್ತಿರುವ ಹಾಗೆ ಫ್ಯಾಕ್ಟರಿಗಳಲ್ಲಿ ಅಪಘಾತಕ್ಕೊಳಗಾದವರಿಗೆ ವರ್ಕ್‌ಮನ್‌ಷಿಪ್ ಪ್ರಕಾರ ಕಾಂಪೆನ್ಸೇಷನ್ ಕೊಡಬೇಕಾಗುತ್ತದೆ. ಫ್ಯಾಕ್ಟರಿ ಆಕ್ಟಿನಲ್ಲಿ ಇದಕ್ಕೆ ತಕ್ಕ ನಿಯಮಾವಳಿಗಳು ಇವೆ. ಇಲ್ಲಿ ಪುಸ್ತಕದೊಳಗೂ ಅದು ಇಲ್ಲ. ಲಿಫ್ಟ್‌ನಲ್ಲಿ ಆಕ್ಸಿಡೆಂಟಿಗೆ ಒಳಗಾದವರಿಗೆ ಏನಾದರೂ ಪರಿಹಾರ ಕೊಡಬೇಕು ಎನ್ನುವುದಕ್ಕೆ ಸ್ಪಷ್ಟವಾದ ಅಭಿಪ್ರಾಯವನ್ನು ತಾವು ವ್ಯಕ್ತ ಪಡಿಸಬೇಕು. ಇದನ್ನು ತಮ್ಮ ಕಾನೂನಿನಲ್ಲಿ ಸೇರಿಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಮೂರನೆಯದಾಗಿ, ಮಾನ್ಯ ಶಾಮಣ್ಣನವರು ಲಿಫ್ಟ್‌ಗಳನ್ನು ನಡೆಸುವುದಕ್ಕೆ ಟ್ರೈನಿಗ್ ಆದಂಥ ಜನ ಬೇಕು ಎಂದು ಹೇಳಿದರು, ಅವರ ಅಭಿಪ್ರಾಯವನ್ನು ನಾನೂ ಒಪ್ಪಿಕೊಂಡು ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎಂದು ಮಾತನ್ನು ಮುಗಿಸುತ್ತೇನೆ

ಶ್ರೀ ಜಿ. ಎಂ. ಜನ್ನಬಸಪ್ಪ.—ಬಹಳ ಸಂತೋಷದ ಸಂಗತಿ ಏನೆಂದರೆ, ಈ ಬಿಲ್ಲಿನ ಅವಶ್ಯಕತೆಯನ್ನು ಎಲ್ಲಾ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ. ಮತ್ತು ಅವರು ಮಾತನಾಡುವಾಗ ಒಂದೆರಡು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಶಾಮಣ್ಣನವರು ಎಲೆಕ್ಟ್ರಿಸಿಟಿ ಫೇಲ್ ಆಗದಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. ನಾನು ಎಷ್ಟು ಪ್ರಯತ್ನ ಮಾಡಿದರೂ ಒಂದೊಂದು ವೇಳೆ ಅದು ನಮ್ಮ ಶಕ್ತಿಯನ್ನು ಮೀರಿ ಹೋದಂಥ ಕಾಲದಲ್ಲಿ ಇಂಥ ಸಣ್ಣ ಪುಟ್ಟ ಆಕ್ಸಿಡೆಂಟುಗಳನ್ನು ತಪ್ಪಿಸುವುದ ಕಷ್ಟವಾಗುತ್ತದೆ. ಆದರೆ ಇಷ್ಟು ಭರವಸೆಯನ್ನು ತಮಗೆ ಕೊಡಬಲ್ಲೆ, ವಿದ್ಯುಚ್ಛಕ್ತಿ ಫೇಲ್ ಆಗುವುದನ್ನು ಅದಷ್ಟು ಕಡಿಮೆ ಮಾಡಬೇಕು ಎಂದು ಸತತವಾಗಿ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಎಂ.ಎಸ್.ಇಬಿ. ಯವರೂ ಕೂಡ ಪ್ರಯತ್ನ ಮಾಡುತ್ತಾರೆಂದು ಭರವಸೆ ಕೊಡುತ್ತೇನೆ.

ಆಪರೇಟರ್ಸ್‌ಗೆ ಟ್ರೈನಿಂಗ್ ಕೊಡಬೇಕೂ ಎನ್ನುವುದಕ್ಕೆ ಸರ್ಕಾರದವರು ಯಾವರೀತಿ ಮಾಡಬೇಕು ಎನ್ನುವುದನ್ನು ಯೋಚನೆ ಮಾಡಿ ಮಾಡುತ್ತಾರೆ. ಟ್ರೈನಿಂಗ್ ಆದಂಥ ಜನಗಳನ್ನು ಹಾಕಬೇಕು ಎನ್ನುವುದರಲ್ಲಿ ನನಗೂ ನಿಮಗೂ ಯಾವ ಭಿನ್ನಾಭಿಪ್ರಾಯವಿಲ್ಲ.

ಮತ್ತು ಆಕ್ಸಿಡೆಂಟ್ ನಡೆಯಂದಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಅದಕ್ಕೇ ಈ ಶಾಸನವನ್ನು ತಂದಿರುವುದು. ಈ ಕೆಲಸವನ್ನು ಸರಿಯಾಗಿ ನೋಡಿಕೊಳ್ಳಲು ಜನ ಇರಬೇಕು. ಆಗಾಗ್ಗೆ ಇನ್ಸ್‌ಪೆಕ್ಷನ್ ಮಾಡಬೇಕು, ತಪ್ಪುಗಳನ್ನು ಸರಿಪಡಿಸಬೇಕು, ಲೋಪ ದೋಷಗಳನ್ನು ತಿದ್ದಬೇಕು ಎಂಬುದೇ ಈ ಶಾಸನದ ಉದ್ದೇಶವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್ ರವರು ಎರಡು ಮುಖ್ಯವಾದ ವಿಷಯಗಳನ್ನು ಹೇಳಿದರು. ಒಂದು ಇದರಲ್ಲಿ ವರಮಾನ ಹೆಚ್ಚು ಪಡೆಯೋವುದಕ್ಕೆ ಅವಕಾಶವಿದೆ ಎಂಬುದು. ಆದನ್ನೇಕೆ ಪಡೆಯಬಾರದು ಎಂದು ಕೇಳಿದರು. ಈಗತಾನೆ ಈ ಶಾಸನವನ್ನು ರಾಜ್ಯದಲ್ಲಿ ತರುತ್ತಿದ್ದೇವೆ, ಕೆಲವು ಕಾಲ ಈಗೇನು ಪ್ರಪೋಸ್ ಮಾಡಿದ್ದೇವೆ ಅದರ ಪ್ರಕಾರ ನಡೆಯುತ್ತದೆ, ಅದರ ಅನುಭವ ನೋಡಿ ಹೆಚ್ಚು ಲಾಭ ಬರುವುದಕ್ಕೆ ಅವಕಾಶವಿದ್ದರೆ ಮುಂದೆ ಆದನ್ನು ಪಡೆಯಲು ಅವಕಾಶ ಮಾಡಲು ಅಡ್ಡಿಯಿಲ್ಲ. ಈಗ ಹೊಸದಾಗಿ ಮಾಡುವಾಗ ಈಗೇನು ಪ್ರಪೋಸ್ ಮಾಡಿದ್ದೇವೆ ಅದರಂತೆ ನಡೆದರೆ ಅದರಿಂದ ಜನರಿಗೆ ತೊಂದರೆಯಾಗದಂತೆ ನೋಡಿಕೊಂಡು ವರಮಾನ ಬರುವುದಕ್ಕೆ ಸಾಧ್ಯವಿದ್ದರೆ ಮುಂದೆ ಅದನ್ನು ಪಡೆಯಲು ಅಡ್ಡಿಯಿಲ್ಲ. ಈಗ ಸದ್ಯಕ್ಕೆ ಇಷ್ಟೇ ಇರಲಿ, ಇದಕ್ಕೆ ಒಪ್ಪಿಗೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಎಸ್ ಕೃಷ್ಣನ್.—ಸರಕಾರ ನಡೆಸುವವರು ನೀವೇ ಬೇಡ ಎಂದರೆ ಬಿಡಿ.

SRI H. M. CHANNABASAPPA.—We are just now introducing this Bill. We will see how it works for a year or two. If there are possibilities of getting more money, I should have no objection and I will not come in the way. ಇದರಿಂದ ತೊಂದರೆಯಾಗಬಾರದು. ಅವರು ಹೇಳಿದಹಾಗೆ ತೊಂದರೆ ಆಗೇ ಆಗುತ್ತದೆ ಒಂದು ಮನೆಗೆ ಒಂದು ಸಾವಿರ ರೂಪಾಯಿ ಬಾಡಿಗೆಯಿದ್ದರೆ ಲಿಫ್ಟ್ ಹಾಕಿದರೆ ಬಾಡಿಗೆ ಹೆಚ್ಚಾಗುತ್ತದೆ. ಸ್ವಲ್ಪ ಕಾದು ನೋಡೋಣ. ಅಪಘಾತವಾದರೆ ಪರಿಹಾರ ಕೊಡುವವರು ಯಾರು ಅದಕ್ಕೆ ವ್ಯವಸ್ಥೆಯೇನು ಎಂದೇ ಕೇಳಿದರು. ಅಪಘಾತ ಲೇರೆಯವರಿಂದ ಆಗುವುದಿಲ್ಲ, ವಿದ್ಯುಚ್ಛಕ್ತಿ ಅಕಸ್ಮಾತ ನಿಂತರೆ ಮನುಷ್ಯ ಲಿಫ್ಟಿನಲ್ಲಿ ಹಾಗೆಯೇ ಇರುತ್ತಾನೆ, ಪ್ರಾಣಾಪಾಯವಾಗುವಂಥ ಪರಿಸ್ಥಿತಿ ಬರುವುದು ಗಮನಕ್ಕೆ ಬಂದಿಲ್ಲ. ಪ್ರಾಣಾಪಾಯವಾಗುವುದು ಅಥವ ಶರೀರಕ್ಕೆ ತೊಂದರೆ ಬರುವುದು ಅಸಂಭವ ಎಂದು ಹೇಳಬಹುದು. ಲಿಫ್ಟ್ ಮಧ್ಯೆ ನಿಂತರೆ ಅನಾನುಕೂಲವಾಗಬಹುದು, ವಾಪಸು ಮೇಲಕ್ಕೆ ಅಥವ ಕೆಳಕ್ಕೆ ಕರೆದುಕೊಳ್ಳುವವರೆಗೆ ತೊಂದರೆಯಾಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಎರಡು ರೀತಿಯ ಅಪಘಾತವಾಗುವುದು, ಲಿಫ್ಟಿಗೆ ಸ್ಟೀಲ್ ಸ್ಟ್ರಕ್ಚರ್ ಹಾಕಿರುವಲ್ಲಿ, ಅದು ಗಟ್ಟಿಯಾಗಿದ್ದರೂ ಕೂಡ ಎಲ್ಲಾ ಕಡೆಯೂ ಒಂದೇ ರೀತಿಯ ಲಿಫ್ಟ್ ಇರುವುದಿಲ್ಲ, ಆದು ವೇರೌಟ್ ಆದರೆ ಧಡಕ್ ಎಂದು ಬೀಳುವುದು. ವಿದ್ಯುತ್ ಯಾವಾಗ ನಿಲ್ಲುವುದೆಂಬುದು ಗೊತ್ತಾಗುವುದಿಲ್ಲ. ಅಂಥ ಸಮಯದಲ್ಲಿ ಕಂಟಿನಜೆನ್ಸಿ ಇಟ್ಟುಕೊಳ್ಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೂರವೃಷ್ಟಿಯಿಂದ ಯೋಚನೆಮಾಡುವುದಾದರೆ ಅದೂ ಆಗಬ್ಬಹುದು. ಆ ಕಾರಣದಿಂದ ಈಗ ಮೂರು ತಿಂಗಳಿಗೊಮ್ಮೆ ಒಬ್ಬ ಇನ್‌ಸ್ಪೆಕ್ಟರು, ಉನ್ನತ ಅಧಿಕಾರಿ ಪರೀಕ್ಷಿಸಬೇಕು ಎಂದು ಮಾಡಲಾಗಿದೆ. ಆದುದರಿಂದ ಬಿಲ್ಲಿನಲ್ಲಿ ಪ್ರೊವೈಡ್ ಮಾಡಿರುವಂತೆ ಕೆಲವು ಕಾಲ ನೋಡಿ ಆವಶ್ಯಕವಿದ್ದರೆ ಆಮೇಲೆ ಮಾನ್ಯ ಸದಸ್ಯರು ಹೇಳಿರುವುದಕ್ಕೇನು ಮಾಡಬೇಕೋ ಯೋಚನೆಮಾಡೋಣ. ಇದುವರೆಗೆ ಆ ರೀತಿ ಆಗಿರುವುದು ಕಡಮೆ.

ತಾವು ಕೊಟ್ಟ ಸಲಹೆಯನ್ನು ಸರಕಾರ ಗಮನಿಸುವುದು. ಮುಂದೆ ಹೇಗಾಗಬೇಕೆಂಬುದನ್ನು ಯೋಚನೆಮಾಡೋಣ, ಈಗ ಈ ಬಿಲ್ಲನ್ನು ತಾವೆಲ್ಲಾ ಒಪ್ಪಿದ್ದಕ್ಕೆ ಸಂತೋಷವಾಗಿದೆ.

Announcement of the Message of the Governor.

MADAM SPEAKER.—I would like to read the massage from the Governor of Mysore in this connection, which is as follows :—